**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:03.11.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದ:</u>**

ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. 4 ನೇ ಪ್ರತಿವಾದಿ ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಅವರಿಗೆ ಅಪಘಾತದಲ್ಲಿ ತಲೆಗೆ ಏಟಾಗಿ ಕಣ್ಣು ಸರಿಯಾಗಿ ಕಾಣುವುದಿಲ್ಲ. ಸಾಮಾನ್ಯ ಅಧಿಕಾರ ಪತ್ರದಲ್ಲಿ ಸದರಿ ವಿಚಾರ ಉಲ್ಲೇಖಿಸಿರುವುದಿಲ್ಲ. ಅವರು ಆರೋಗ್ಯವಾಗಿದ್ದರೂ ಕೂಡಾ ಅವರು ನ್ಯಾಯಾಲಯಕ್ಕೆ ಖುದ್ದು ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಸ.ನಂಬರ್ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರಿದು ನಮ್ಮದು ಗ್ರಾಮ ಠಾಣಾ ಸಂಬಂಧಿಸಿದ ಆಸ್ತಿ ಇರುತ್ತದೆ. ವಾದಿ ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ವಾದಿ ಈ ದಾವೆಯಲ್ಲಿ ನಮ್ಮ ಗ್ರಾಮ ಠಾಣಾದ ಆಸ್ತಿ ಅವರ ಸ.ನಂ. ಆಸ್ತಿ ಇರುತ್ತದೆ ಎಂದು ಸುಳ್ಳು ಪ್ರತಿಪಾದಿಸಿ ಈ ಸುಳ್ಳು ದಾವೆ ಹೂಡಿರುತ್ತಾರೆ. ನಮ್ಮ ಕುಟುಂಬಕ್ಕೆ ಗ್ರಾಮ ಠಾಣಾ ಆಸ್ತಿ ಮತ್ತು ಸ.ನಂ. ಆಸ್ತಿ ಎರಡೂ ಇದೆ. ಗ್ರಾಮ ಠಾಣಾ ಆಸ್ತಿಗೆ ಸಂಬಂಧಿಸಿದಂತೆ ಪ್ರಸ್ತುತ ನಮೂನೆ 9 ಮತ್ತು 11(ಎ) ದಾಖಲೆಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಮ್ಮ ಆಸ್ತಿಗೆ ಇನ್ನೂ ನಮೂನೆ 9 ಮತ್ತು 11(ಎ) ದಾಖಲೆಗಳು ಇರುವುದಿಲ್ಲ ಆದರೆ ಡಿಮಾಂಡ್ ರಿಜಿಸ್ಟರ್ ಮತ್ತು ಅಸೆಸ್ ಮೆಂಟ್ ರಿಜಿಸ್ಟರ್ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ಕಂದಾಯ ಇಲಾಖೆಗೆ ಒಳಪಟ್ಟ ಆಸ್ತಿಗಳಿಗೆ ಪಹಣಿ ಪತ್ರಿಕೆ, ಮ್ಯುಟೇಶನ್ ಆದೇಶ ಮತ್ತು ಸರ್ವೆ ದಾಖಲೆಗಳು ಇರುತ್ತವೆ ಎಂದರೆ ಸರಿ.

ನಿ ಪಿ 1 ರಿಂದ 5 ರ ಪಹಣಿ ಪತ್ರಿಕೆಗಳಲ್ಲಿ ಕಂಡುಬರುವಂತೆ ಸದರಿ ಕನ್ನಹಳ್ಳಿ ಗ್ರಾಮದ ಸ.ನಂ.193/8 ರಲ್ಲಿ 3 ಗುಂಟೆ ಆಸ್ತಿ ಮಂಜುಳಾ ಕೋಂ ಲೇ.ಲೋಕೇಶ್ ಮೂರ್ತಿ ಅವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿ. 1 ನೇ ವಾದಿಯಾದ ಮಂಜುಳಾ ಅವರು ಲೋಕೇಶ ಮೂರ್ತಿಯವರ ಹೆಂಡತಿ ಇರುತ್ತಾರೆ ಎಂದರೆ ಸರಿ. ಲೋಕೇಶ ಮೂರ್ತಿಯವರು ಮೃತಪಟ್ಟ ನಂತರ ದಾವಾ ಸ್ವತ್ತಿನ ಖಾತೆಯು 1 ನೇ ವಾದಿಯ ಹೆಸರಿಗೆ ಪೌತಿ ಖಾತೆಯಂತೆ ವರ್ಗಾವಣೆ ಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿ ಯು ಮುಂದುವರಿದು ನ್ಯಾಯಾಲಯದಲ್ಲಿ ಅವರು ಹಾಜರು ಪಡಿಸಿರುವ ಪಹಣಿ ಪತ್ರಿಕೆ ಮತ್ತು ಮ್ಯುಟೇಶನ್ ಆದೇಶದಂತೆ ಆ ರೀತಿ ಕಂಡು ಬರುತ್ತಿದೆ ಎಂದು ನುಡಿಯುತ್ತಾರೆ.

ನಿ ಪಿ 6 ರಿಂದ 17ರ ದಾಖಲೆಗಳಲ್ಲಿ 1 ನೇ ವಾದಿಯ ಗಂಡಾದ ಲೋಕೇಶ ಮೂರ್ತಿಯವರ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇರುತ್ತದೆ ಎಂದರೆ ಸರಿ. ಲೋಕೇಶ ಮೂರ್ತಿಯವರು ಮೃತಪಟ್ಟ ದಿನಾಂಕ ನನಗೆ ನೆನಪಿಲ್ಲ. ನಿ ಪಿ 18 ರಿಂದ 21ರ ಪಹಣಿ ಪತ್ರಿಕೆಗಳಲ್ಲಿ ದಾವಾ ಸ್ವತ್ತಿನ ಖಾತೆ 1 ನೇ ವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ನಿ ಪಿ 22 ರಂತೆ ಲೋಕೇಶ ಮೂರ್ತಿಯವರು ಮೃತಪಟ್ಟ ನಂತರ ಪೌತಿ ಖಾತೆಯಂತೆ 1 ನೇ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆಯು ಪೌತಿ ಖಾತೆಯಂತೆ ವರ್ಗಾವಣೆ ಆಗುವಂತೆ ಎಂ ಆರ್ ನಂಬರ್ ಹೆಚ್ 114/2011-12 ರಂತೆ ಆದೇಶವಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆಯು ಹಿಂದಿನಿಂದಲೂ 1 ನೇ ವಾದಿಯ ಗಂಡನ ಹೆಸರಿನಲ್ಲಿ ಇದ್ದ ಬಗ್ಗೆ ಮತ್ತು ಅವರು ಮೃತಪಟ್ಟ ನಂತರ 1 ನೇ ವಾದಿಯ ಹೆಸರಿಗೆ ಪೌತಿ ಖಾತೆಯಂತೆ ವರ್ಗಾವಣೆ ಗೊಂಡು ಅವರ ಹೆಸರಿನಲ್ಲಿ ದಾವಾ ಆಸ್ತಿಯ ಖಾತೆ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿಗಳಿಗೂ ಮತ್ತು ನಮಗೂ ಮೊದಲಿನಿಂದಲೂ ಆಸ್ತಿಗೆ ಸಂಬಂಧಿಸಿದಂತೆ ಕಲಹ ಇತ್ತು ಎಂದರೆ ಸರಿ. ನನಗೆ ದಾವಾ ಸ್ವತ್ತಿನ ಖಾತೆ 1 ನೇ ವಾದಿಯ ಹೆಸರಿಗೆ ವರ್ಗಾವಣೆ ಗೊಂಡ ಬಗ್ಗೆ ಮಾಹಿತಿ ಇರಲಿಲ್ಲ ಇತರೆ ಪಿತ್ರಾರ್ಜಿತ ಸ್ವತ್ತುಗಳ ಖಾತೆಯು ಅವರ ಹೆಸರಿಗೆ ಆಗಿರುವ ಬಗ್ಗೆ ನನಗೆ ತಿಳಿದಿತ್ತು.

ದಾವಾ ಸ್ವತ್ತಿನ ಖಾತೆ 1 ನೇ ವಾದಿಯ ಹೆಸರಿನಲ್ಲಿ ಇರುವ ವಿಚಾರ ನನಗೆ ವಾದಿಗಳು ಈ ದಾವೆ ಹೂಡಿದ ನಂತರ ನನಗೆ ತಿಳಿದುಬಂದಿರುತ್ತದೆ. ಸದರಿ ವಿಚಾರ ನನಗೆ ತಿಳಿದ ನಂತರ ನಾನು 1 ನೇ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆ ವರ್ಗಾವಣೆ ಗೊಂಡ ಮ್ಯುಟೇಶನ್ ಆದೇಶವನ್ನು ನಾನು ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ.

ನಿ ಪಿ 26 ರ ಆಕಾರ ಬಂದ್ ನಲ್ಲಿ ಸ.ನಂ.193/8 ರಲ್ಲಿ 3 ಗುಂಟೆ ಎಂದು ನಮೂದು ಇದೆ ಎಂದರೆ ಸರಿ. ನಿ ಪಿ 25 ರಂತೆ ಸದರಿ ಆಸ್ತಿಯು ಪೋಡಿಯಾದ ನಂತರ ಪ್ರತ್ಯೇಕ ಆಕಾರ ಬಂದ್ ಕೊಡಲಾಗಿದೆ ಎಂದರೆ ಸರಿ.

1 ನೇ ವಾದಿಯು ತನ್ನ ದಾವಾ ಸ್ವತ್ತಿಗೆ ಬೇಲಿ ಹಾಕುವ ಸಂದರ್ಭದಲ್ಲಿ ನಾವು ತೊಂದರೆ ಕೊಟ್ಟ ಕಾರಣ ಅವರು ನಮ್ಮ ವಿರುದ್ಧ ದಿ:10.07.2019 ರಂದು ಪೊಲೀಸರಿಗೆ ದೂರು ಕೊಟ್ಟಿದ್ದರು ಎಂದರೆ ಸಾಕ್ಷಿಯು ದೂರು ಕೊಟ್ಟಿದ್ದು ಸರಿ, ಆದರೆ ದೂರಿನಲ್ಲಿರುವ ವಿಚಾರ ಸುಳ್ಳು ಇರುತ್ತದೆ, ನಮಗೆ ಸೇರಿದ ಗ್ರಾಮಾ ಠಾಣಾ ಸ್ವತ್ತನ್ನು ಬಿಟ್ಟು ನಿಮ್ಮ ಸ್ವತ್ತಿಗೆ ನೀವು ಬೇಲಿ ಹಾಕಿಕೊಳ್ಳಿ ಎಂದು ನಾವು 1 ನೇ ವಾದಿಗೆ ಕೇಳಿಕೊಂಡಿರುತ್ತೇವೆ, ಅವರು ಹೇಳುವಂತೆ ನಾವು ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರನ್ನು ನನ್ನ ತಾಯಿ, ನನ್ನ ಅಣ್ಣ, ನನ್ನ ವಿರುದ್ಧ ಮತ್ತು ಇತರರ ವಿರುದ್ಧ

ಕೊಟ್ಟಿರುತ್ತಾರೆ ಎಂದರೆ ಸರಿ. ಸ.ನಂ.193/8 ರಲ್ಲಿ 3 ಗುಂಟೆಗೆ ಬೇಲಿ ಹಾಕುವ ವಿಚಾರವಾಗಿ ಸದರಿ ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿ.



ನಮ್ಮ ಗ್ರಾಮಾ ಠಾಣಾ ಆಸ್ತಿಯನ್ನು ಹೊರತುಪಡಿಸಿ ಅವರ ದಾವಾ ಸ್ವತ್ತಿಗೆ ಅವರು ಬೇಲಿ ಹಾಕಿಕೊಳ್ಳಲು ನಮ್ಮ ಅಡಚಣೆ ಇರುವುದಿಲ್ಲ. ವಾದಿ ನ್ಯಾಯಾಲಯದಿಂದ ನಿಯೋಗಿಯವರನ್ನು ನೇಮಿಸಿಕೊಂಡು ಅವರ ದಾವಾ ಸ್ವತ್ತನ್ನು ಅಳತೆ ಮಾಡಿ ಬೇಲಿ ಹಾಕಿಕೊಳ್ಳಲು ನನಗೆ ತೊಂದರೆ ಇರುತ್ತದೆ.

2021 ರಲ್ಲಿ ನಿ ಪಿ 29 ರಂತೆ ವಾದಿಯು ನನ್ನ ವಿರುದ್ಧ ಮತ್ತೊಂದು ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ದೂರನ್ನು ವಾದಿಗಳು ಹಾಕಿದ್ದ ಅಳತೆ ಕಲ್ಲುಗಳನ್ನು ನಾವು ಕಿತ್ತಿರುತ್ತೇವೆ ಎಂದು ಕೊಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಆ ರೀತಿ ವಾದಿಗಳು ಯಾವುದೇ ಅಳತೆ ಕಲ್ಲುಗಳನ್ನು ಹಾಕಿರಲಿಲ್ಲ ಮತ್ತು ನಾವು ಆ ರೀತಿ ಯಾವುದೇ ಅಳತೆ ಕಲ್ಲನ್ನು ಕಿತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ತಹಶೀಲ್ದಾರರು ಕೂಡಾ ರಾಜಸ್ವ ನಿರೀಕ್ಷಕರ ವರದಿಯಂತೆ ನಾವು ಅಳತೆ ಕಲ್ಲುಗಳನ್ನು ಕಿತ್ತುಹಾಕಿದ ಕಾರಣ ಸೂಕ್ತ ಭದ್ರತೆ ಒದಗಿಸಿ ಅಳತೆ ಕಾರ್ಯ ಕೈಗೊಂಡು ಅಳತೆ ಕಲ್ಲುಗಳನ್ನು ಅಳವಡಿಸಲು ಸಹಕರಿಸುವಂತೆ ಪೊಲೀಸ್ ನಿರೀಕ್ಷಕರಿಗೆ ಪತ್ರ ಬರೆದಿದ್ದರು ಎಂದೆರ ಸರಿಯಲ್ಲ. ಅದೇ ರೀತಿ ನಮ್ಮ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ 1 ನೇ ವಾದಿಯು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದರು ಎಂದರೆ ಸರಿಯಲ್ಲ. ನಾನು ಅಳತೆ ಕಾರ್ಯದ ವಿಚಾರವಾಗಿ ಡಿ ಡಿ ಎಲ್ ಆರ್ ಮತ್ತು ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಗಳು ಚಾಲ್ತಿಯಲ್ಲಿರುವ ಕಾರಣ ತಹಶೀಲ್ದಾರರು ದಾವಾ ಸ್ವತ್ತಿನ ಅಳತೆ ಕಾರ್ಯವನ್ನು ಮುಂದೂಡಿರುತ್ತಾರೆ ಎಂದರೆ ಸರಿಯಲ್ಲ.

ಈ ದಾವೆಯ ಇತರೆ ಪ್ರತಿವಾದಿಗಳ ಯಾರೆಂದು ನನಗೆ ಗೊತ್ತು. 1 ನೇ ಪ್ರತಿವಾದಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಿ ಪಿ 49 ರಂತೆ ಒಂದು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಿ ಪಿ 50 ರಂತೆ ಡಿ ಡಿ ಎಲ್ ಆರ್ ನ್ಯಾಯಾಲಯದಲ್ಲಿ ಅವರು ಒಂದು ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಎರಡೂ ಪ್ರಕರಣಗಳು ವಜಾಗೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತನ್ನು 1 ನೇ ವಾದಿಯ ಗಂಡನಾದ ಲೋಕೇಶ ಮೂರ್ತಿಯವರು ನಿ ಪಿ 51 ರ ನೋಂದಾಯಿತ ಕ್ರಯಪತ್ರದಂತೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿರುವ ಸಂಗತಿಗಳು ನನಗೆ ಗೊತ್ತು.



ನಿ ಡಿ 2 ರಲ್ಲಿ ದಾವಾ ಸ್ವತ್ತು ನಮೂದು ಇರುವುದಿಲ್ಲ. ಸಾಕ್ಷಿಯು ಮುಂದುವರಿದು ಸದರಿ ದಾಖಲೆಯು ನಮ್ಮ ಗ್ರಾಮ ಠಾಣಾ ಸ್ವತ್ತಿನ ಕ್ರಯಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ನಿ ಡಿ 3 ರ ಕ್ರಯ ಪತ್ರದಲ್ಲೂ ಕೂಡಾ ದಾವಾ ಸ್ವತ್ತಿನ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ಹಾಜರು ಪಡಿಸಿರುವ ಇತರೆ ದಾಖಲೆಗಳು ಕೂಡಾ ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವುಗಳು ಗ್ರಾಮ ಠಾಣಾ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ, ವಾದಿಗಳು ನಮ್ಮ ಗ್ರಾಮಾ ಠಾಣಾ ಸ್ವತ್ತಿನಲ್ಲೇ ಅವರ ದಾವಾ ಸ್ವತ್ತು ಅಸ್ತಿತ್ವದಲ್ಲಿರುವುದಾಗಿ ಈ ಸುಳ್ಳು ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಗಳ ದಾವಾ ಸ್ವತ್ತೇ ಬೇರೆ ಮತ್ತು ನಿ ಡಿ 1 ರಿಂದ 7 ರ ದಾಖಲೆಗಳು ಬೇರೆ ಇರುತ್ತವೆ ಎಂದರೆ ಸರಿಯಲ್ಲ. 1 ನೇ ವಾದಿಯ ಗಂಡ ಜೀವಂತ ಇರುವವರೆಗೂ ನಾವು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾವು ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅವರೂ ಕೂಡಾ ನಮಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ವಾದಿ ಮೈಸೂರಿನಲ್ಲಿ ವಾಸವಿದ್ದು, 2 ರಿಂದ 3 ನೇ ವಾದಿಗಳು ಮದುವೆಯಾಗಿ ಅವರ ಗಂಡಂದಿರ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1 ನೇ ವಾದಿಗೆ ನಮ್ಮ ಊರಿನಲ್ಲಿ 8 ರಿಂದ 10 ಎಕರೆಯಷ್ಟು ಜಮೀನು ಇರುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ 1 ನೇ ವಾದಿಯ ಮನೆ ಮತ್ತು ಹಿತ್ತಲು ಮತ್ತು ನಮ್ಮ ಮನೆಗಳು ಇರುತ್ತವೆ ಎಂದರೆ ಸರಿಯಲ್ಲ. 1 ನೇ ವಾದಿ ಊರಿಗೆ ವ್ಯವಸಾಯ ಮಾಡಲು ಬಂದಾಗ ಅವರ ಮನೆಯಲ್ಲಿ ವಾಸ ಇರುತ್ತಾರೆ. ಅವರ ಮನೆಯ ದಕ್ಷಿಣಕ್ಕೆ ನಮ್ಮ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮತ್ತು ಇತರೆ ಪ್ರತಿವಾದಿಗಳು ಸೇರಿ ವಾದಿಗಳ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾವು ಅವರಿಗೆ ಅನೇಕ ರೀತಿಯಲ್ಲಿ ತೊಂದರೆ ಗಳನ್ನು ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ಸರ್ವೆ ಇಲಾಖೆಯಿಂದ ಅಳವಡಿಸಿದ ಸರ್ವೆ ಕಲ್ಲುಗಳನ್ನು ನಾಶಮಾಡಿ ನಾವು ಅವರಿಗೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿ

ಯಲ್ಲ. 1 ನೇ ಪ್ರತಿವಾದಿ ವಾದಿಗಳ ಮೇಲೆ ಬೇರೆ ಎರಡು ದಾವೆ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2002 ರಲ್ಲಿ ನನ್ನ ತಂದೆಯಾದ ಲೇ. ಪ್ರಕಾಶ ಮೂರ್ತಿಯವರು ಮತ್ತು ಗುರುರಾಜ್ ರವರು 1 ನೇ ವಾದಿ ಮತ್ತು ಅವರ ಗಂಡನ ಮೇಲೆ ದಾವೆ ಹೂಡಿದ್ದಾಗಿನಿಂದ ನಮ್ಮ ನಡುವಿನ ಸಂಬಂಧ ಸರಿಯಿಲ್ಲ ಎಂದರೆ ಸರಿ. ಹಾಗಾಗಿ ನಾವು ವಾದಿಗಳ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟ ಕಾರಣ ವಾದಿಗಳು ನಮ್ಮ ವಿರುದ್ಧ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ.



ಉದ್ದೇಶಪೂರ್ವಕವಾಗಿ ನನ್ನ ಅಣ್ಣ ಮತ್ತು ಇತರೆ ಪ್ರತಿವಾದಿಗಳು ಈ ದಾವೆಯಲ್ಲಿ ಹಾಜರಾಗದೇ ನಾನು ಅವರೆಲ್ಲರ ಪರವಾಗಿ ದುರುದ್ದೇಶದಿಂದ 4 ನೇ ಪ್ರತಿವಾದಿ ಸಲ್ಲಿಸಿರುವ ಸುಳ್ಳು ಪ್ರತಿವಾದ ಪತ್ರಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ 51 ರ ಕ್ರಯಪತ್ರ ಆದಾಗಿನಿಂದ ಲೋಕೇಶ ಮೂರ್ತಿಯವರು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದು ಅವರು ಮೃತಪಟ್ಟ ನಂತರ ವಾದಿಗಳು ದಾವಾ ಸ್ವತ್ತಿನ ಮಾಲಿಕತ್ವ ಸ್ವಾಧೀನದಲ್ಲಿರುವ ವಿಚಾರ ನನಗೆ ತಿಳಿದಿದ್ದರೂ ಸಹ ನಾನು ವಾದಿಗಳ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ.**